

# ನೇಸರನ ಓಕುಳಿಯಾಟ

ಬಾನಂಗಳದಲ್ಲಿ ನೇಸರನ ಓಕುಳಿಯಾಟ
ಬಣ್ಣಗಳ ಮಿಲನದ ಚಿತ್ತಾಕರ್ಷಕ ಮಾಟ
ನಯನ ಮನೋಹರ ಪ್ರಕೃತಿಯ ಆಟ
ಕಲಾಕಾರನ ಕುಂಚದಿ ಸೆರೆಯಾಗಿಹ ನೋಟ

ಎವೆಯಿಕ್ಕದೆ ನೋಡುತಿರುವ ಆ ಮರದ ಕೊಂಬೆಗಳು
ಸಾರುತಿದೆ ಸಾಸಿರ ಸುಮಧುರ ಭಾವನೆಗಳು
ಆ ಬಣ್ಣಗಳಲ್ಲೊಮ್ಮೆ ಮಿಂದೇಳಬೇಕೆಂಬ ಆಲೋಚನೆಗಳು
ಪುಳಕಿತಗೊಳಿಸುವ ಅರುಣನ ಹೊಂಗಿರಣಗಳು.

ತನ್ನ ಕಂದನಿಗೆ ಪ್ರಕೃತಿ ವೈಚಿತ್ರ್ಯವ ಪರಿಚಯಿಸುತ
ಪ್ರೀತಿಯ ಮಗುವಿನ ತೊದಲು ನುಡಿ ಕೇಳುತ
ಅಮ್ಮನ ಪ್ರೀತಿಯ ಕಂದನಿಗೆ ಉಣಬಡಿಸುತ
ಪರಿಸರದೊಂದಿಗೆ ಒಲವ ಬಾಂಧವ್ಯ ಬೆಳೆಸುತ.

**ಲಕ್ಷ್ಮೀ ಕಿಲೆಂಜಾರು**

# ಸತ್ಯ

ದೇಗುಲ ಯಾವುದಿಲ್ಲಿ ?
ತಾಯಿಯೊ ಪ್ರಕೃತಿಯೊ
ವೃಕ್ಷವೊ ಅದರೊಳಗಿನ
ಪಕ್ಷಿಯೊ
ಮೈಮರೆತಿರುವ
ಮನಸೊ
ದ್ವೈತವಾಗಿ ಹೊರಟಿರುವ
ಕನಸೊ ?

ಹೊಕ್ಕುಳಬಳ್ಳಿಯ ಸಂಬಂಧ
ಯಾವುದಲ್ಲವಿಲ್ಲಿ
ತಾಯಿ ಮಗುವಿನದೊ
ಬಾನು ಬಣ್ಣಗಳದೊ
ಆಕಾಶ ಭೂಮಿಯದೊ
ಮರ ಪರಿಸರದ್ದೊ
ಮೂರ್ತದೊಳಗಿನ ಅವ್ಯಕ್ತಗಳೆಷ್ಟೊ

ಕಾಣದ ಕವಲುಗಳೊಳಗೆ
ಬದುಕಿನಾ ಆಸರೆ
ಚಿತ್ರ ವಿಚಿತ್ರ
ಮುಗಿಯದ ಆಕಾರಗಳು
ವರ್ಣಗಳ ಬಟ್ಟೆಯನೊದ್ದ
ಮುಗಿಲಿನ ಅಂತರಂಗದ
ಅಜ್ಞಾತದಲಿ
ಸತ್ಯದ ಸೌಂದರ್ಯ
ಸ್ಥಿರವಾಗಿದೆ

**ಕೆ. ನಿರ್ಮಲ ಮರಡಿಹಳ್ಳಿ**